# ಸಾಹಸ ಮೆರೆದ ಬಾಲಕ



ಭಾಗ–2

ತಾಯಿ ತನ್ನ ಕಣ್ಣೀರಿನಿಂದ ಹಿಟ್ಟನ್ನು ಕಲೆಸಿ ಕೇಕ್ ತಯಾರಿಸಿದಳು. ಬಲಶಾಲಿ ಬಾಲಕ ಕೇಕ್‌ನೊಂದಿಗೆ ಡ್ರಾಗನ್ ಎಳೆದ ಗುರುತು ರೇಖೆಯನ್ನು ಅನುಸರಿಸಿ ಅವನ ಅರಮನೆಗೆ ಹೋದ. ಆಗ ಅವನಿಗೆ ತನ್ನ ತಂಗಿಯ ಧ್ವನಿ ಕೇಳಿಸಿತು. 'ನೀನು ಇಲ್ಲೇಕೆ ಬಂದೆ? ಡ್ರಾಗನ್ ನಿನ್ನನ್ನು ನೊಣದಂತೆ ಕೊಲ್ಲುತ್ತಾನೆ.' ತಂಗಿ ಅಳುವ ಧ್ವನಿಯೂ ಕೇಳಿಸಿತು. ಬಲಶಾಲಿ ಬಾಲಕ ಅವಳನ್ನು ಸಮಾಧಾನ ಪಡಿಸಿ ಅವಳಿಗೆ ಕೇಕ್‌ನ ತುಂಡನ್ನು ತಿನ್ನಲು ಕೊಟ್ಟ. ಕೇಕ್ ತಿಂದ ಬಾಲಕಿ, 'ಇಂತಹ ಕೇಕನ್ನು ನನ್ನ ತಾಯಿ ಮಾತ್ರ ಮಾಡಲು ಸಾಧ್ಯ. ನಿಜ ಹೇಳು, ನೀನ್ಯಾರು?' ಎಂದು ವಿಚಾರಿಸಿದಾಗ ಬಲಶಾಲಿ ಬಾಲಕ ಎಲ್ಲಾ ವಿಷಯವನ್ನು ಹೇಳಿದ.

ಬಾಲಕ ತಂಗಿಯನ್ನು ಮನೆಗೆ ಕರೆದುಕೊಂಡು ಹೋಗಲು ಅನುವಾದಾಗ 'ಡ್ರಾಗನ್ ಅಪರಿಚಿತರನ್ನು ನೋಡಿದಾಗ, 'ನೀನು ನನ್ನೊಂದಿಗೆ ಹೋರಾಡುತ್ತೀಯೋ ಅಥವಾ ನನ್ನ ಜೊತೆ ಕೂತು ಊಟ ಮಾಡುತ್ತೀಯೋ, ಹೇಳು?' ಎಂದು ಕೇಳುತ್ತಾನೆ. 'ಯುದ್ಧ ಮಾಡಲು ಬಯಸುತ್ತೇನೆ' ಎಂದರೆ ಅವನು ತನ್ನ ಸೊಂಟದ ಕತ್ತಿಯಿಂದ ಅವನ ಕಾಲುಗಳನ್ನು ಕತ್ತರಿಸಿ, ಅವನನ್ನು ಕಾಲುಗಳೊಂದಿಗೆ ಒಂದು ಆಳದ ಹೊಂಡಕ್ಕೆ ಎಸೆಯುತ್ತಾನೆ. ಒಂದು ವೇಳೆ ಅಪರಿಚಿತ 'ಊಟ ಮಾಡಲು ಬಯಸುತ್ತೇನೆ' ಎಂದರೆ ಅವನನ್ನು ಅರಮನೆಯ ಒಳಗೆ ಕರೆದೊಯ್ದು ಚೆನ್ನಾಗಿ ತಿನ್ನಿಸಿ, ಅವನ ತಲೆಗೆ ಎಲುಬಿನಿಂದ ಹೊಡೆದು ರಕ್ತ ಹೀರುತ್ತಾನೆ. ಒಂದು ವೇಳೆ ಅಪರಿಚಿತ ಎಲುಬಿನ ಹೊಡೆತದಿಂದ ಪಾರಾದರೆ, ತನ್ನ ಕತ್ತಿಗೆ ಆದೇಶಿಸಿ, ಅವನ ಕಾಲುಗಳನ್ನು ಕತ್ತರಿಸಿ, ಅವನನ್ನು ಕಾಲುಗಳೊಂದಿಗೆ ಹೊಂಡಕ್ಕೆ ಎಸೆಯುತ್ತಾನೆ' ಎಂದು ಅವಳು ಎಚ್ಚರಿಕೆ ನೀಡಿದಳು.

ತಂಗಿ ಇನ್ನೂ ಮಾತನ್ನು ನಿಲ್ಲಿಸಿರಲಿಲ್ಲ, ಆಗಲೇ ಡ್ರಾಗನ್ ಪ್ರತ್ಯಕ್ಷನಾಗಿ ಕೇಳಿದ, 'ನೀನು ನನ್ನೊಂದಿಗೆ ಹೋರಾಡುತ್ತೀಯೋ ಅಥವಾ ನನ್ನ ಜೊತೆ ಕೂತು ಊಟ ಮಾಡುತ್ತೀಯೋ ಹೇಳು.'

'ಊಟ ಮಾಡಲು ಬಯಸುತ್ತೇನೆ' ಎಂದ ಬಲಶಾಲಿ ಬಾಲಕನನ್ನು ಡ್ರಾಗನ್ ಅರಮನೆಯೊಳಗೆ ಕರೆದುಕೊಂಡು ಹೋಗಿ ಚೆನ್ನಾಗಿ ಊಟ ಮಾಡಿಸಿದ. ನಂತರ ಉಳಿದ ಎಲುಬಿನ ತುಂಡನ್ನು ಅವನ ತಲೆಗೆ ಹೊಡೆದ. ಆದರೆ ಬಲಶಾಲಿಯಾಗಿದ್ದ ಬಾಲಕನಿಗೆ ಏನೂ ಆಗಲಿಲ್ಲ. ಈಗ ಬಾಲಕ ಅದೇ ಎಲುಬಿನಿಂದ ಡ್ರಾಗನ್ ತಲೆಗೆ ಹೊಡೆದ. ಅವನು ಹೊಡೆದ ರಭಸಕ್ಕೆ ಎಲುಬು ಡ್ರಾಗನ್ನಿನ ಕಣ್ಣುಗಳನ್ನು ಸೀಳಿತು. ಬಲಶಾಲಿ ಬಾಲಕ ಕೂಡಲೇ ಅವನ ಹಿಂದೆ ಬಂದು ಅವನ ಕತ್ತಿಯಿಂದಲೇ ಅವನ ಕಾಲುಗಳನ್ನ ಕಡಿದ. ಆಗಲೂ ಡ್ರಾಗನ್ ಬಾಲಕನನ್ನು ಹೋರಾಟಕ್ಕೆ ಕರೆದ. ಇಬ್ಬರೂ ಭಯಂಕರವಾಗಿ ಹೋರಾಡಿದರು. ಕಡೆಗೆ ಡ್ರಾಗನ್ನಿನ ಬಾಯಿಯಿಂದ ನೀಲಿ ಜ್ವಾಲೆ ಬಂದಿತು, ಬಾಲಕನ ಬಾಯಿಂದ ಹಸಿರು ಜ್ವಾಲೆ ಬಂದಿತು. ಇಬ್ಬರೂ ದಣಿದು ಕುಸಿದು ಬಿದ್ದರು.

ಆಗಲೇ ಆಕಾಶದಲ್ಲಿ ಒಂದು ಹದ್ದು ಹಾರಾಡುತ್ತಿತ್ತು. ಅದನ್ನು ನೋಡಿ ಡ್ರಾಗನ್ ಹೇಳಿದ, 'ನೀನು ಕೂಡಲೇ ಡೆನ್ಯೂಬ್ ನದಿಯಿಂದ ತಣ್ಣನೆಯ ನೀರನ್ನು ನನಗೆ ಕುಡಿಯಲು ತೆಗೆದುಕೊಂಡು ಬಾ. ನೀರು ತರದಿದ್ದರೆ ನಿನ್ನ ಬಂಧು–ಬಾಂಧವರನ್ನು ಕೊಲ್ಲುವೆ.'

ಆದರೆ ಹದ್ದು ಅವನ ಮಾತಿಗೆ ಗಮನ ಕೊಡಲಿಲ್ಲ. ಈಗ ಬಲಶಾಲಿ ಬಾಲಕ ಹದ್ದಿಗೆ ಹೇಳಿದ, 'ನೀನು ನನಗಾಗಿ ಝರಿಯಿಂದ ತಣ್ಣನೆಯ ನೀರನ್ನು ಕುಡಿಯಲು ತಂದರೆ, ನಿನಗೆ ಡ್ರಾಗನ್ನಿನ ಮಾಂಸವನ್ನು ತಿನ್ನಲು ಕೊಡುವೆ.'

ಹದ್ದು ಕೂಡಲೇ ಝರಿಗೆ ಹೋಗಿ ಅವನಿಗೆ ನೀರನ್ನು ತಂದು ಕೊಟ್ಟಿತು. ನೀರು ಕುಡಿದಾಗ ಅವನಿಗೆ ತನ್ನ ಹಿಂದಿನ ಶಕ್ತಿ ಮರಳಿ ಬಂದಿತು. ಅವನು ಕೂಡಲೇ ಡ್ರಾಗನ್ನನ್ನು ಎತ್ತಿ ನೆಲಕ್ಕೆ ಬಲವಾಗಿ ಬಡಿದ. ಡ್ರಾಗನ್ನಿನ ಎಲುಬುಗಳೆಲ್ಲಾ ಮುರಿದು ಪುಡಿ ಪುಡಿಯಾದವು.

ನಂತರ ಬಲಶಾಲಿ ಬಾಲಕ ತಂಗಿಯೊಂದಿಗೆ ತನ್ನಿಬ್ಬರು ತಮ್ಮಂದಿರನ್ನು ಹಾಕಿದ್ದ ಹೊಂಡಕ್ಕೆ ಬಂದು ಅವರನ್ನು ಮೇಲೆತ್ತಿದ. ಅವರು ತುಂಬಾ ನಿಶ್ಶಕ್ತರಾಗಿದ್ದರು. ಅವರನ್ನು ತಂಗಿಯ ಮೇಲ್ವಿಚಾರಣೆಯಲ್ಲಿ ಅಲ್ಲಿಯೇ ಮಲಗಿಸಿ ಬಾಲಕ ನೀರನ್ನು ಅರಸುತ್ತಾ ಹೊರಟ. ಮಾರ್ಗ ಮಧ್ಯದಲ್ಲಿ ಅವನಿಗೆ ಓರ್ವ ವೃದ್ಧೆ ಭೇಟಿಯಾಗಿ ಅನೇಕ ಝರಿಗಳನ್ನು ತೋರಿಸುತ್ತಾ ಹೇಳಿದಳು, 'ಇಲ್ಲಿರುವ ಝರಿಗಳಲ್ಲಿ ವಿಷದ ನೀರಿದೆ. ಶುದ್ಧ ನೀರಿನ ಝರಿಯನ್ನು ಹುಡುಕುವುದು ಕಷ್ಟ'.

ಬಲಶಾಲಿ ಬಾಲಕ ಝರಿಗಳ ಹತ್ತಿರ ಬಂದ. ಅವನಿಗೊಂದು ಉಪಾಯ ಹೊಳೆಯಿತು. ಅವನು ಒಂದು ಮರದಲ್ಲಿದ್ದ ಹೂವುಗಳನ್ನು ಕೊಯ್ದು ತಂದು ಎಲ್ಲಾ ಝರಿಗಳಿಗೂ ಒಂದೊಂದು ಹೂವನ್ನು ಹಾಕುತ್ತಾ ಹೋದ. ಆದರೆ ಎಲ್ಲಾ ಹೂವುಗಳು ಬಾಡಿ, ಒಂದು ಝರಿಯ ಹೂವು ಮಾತ್ರ ಬಾಡಿರಲಿಲ್ಲ. ಅವನು ತಕ್ಷಣ ಎರಡು ಕೊಡಗಳಲ್ಲಿ ಅದರ ನೀರನ್ನು ತುಂಬಿಕೊಂಡು ತನ್ನ ಸಹೋದರರು ಇದ್ದಲ್ಲಿಗೆ ದೌಡಾಯಿಸಿ ಬಂದ. ಇಬ್ಬರ ಕಾಲುಗಳನ್ನು ಮೊದಲಿನಂತೆ ಕೂಡಿಸಿಟ್ಟು ಅವುಗಳ ಮೇಲೆ ಆ ನೀರನ್ನು ಚಿಮುಕಿಸಿದ. ಕಾಲುಗಳು ಮೊದಲಿನಂತೆ ಕೂಡಿಕೊಂಡವು. ಈಗ ನೀರನ್ನು ಅವರ ಇಡೀ ದೇಹದ ಮೇಲೆ ಚಿಮುಕಿಸಿದಾಗ ಸಹೋದರರು ಪೂರ್ಣ ಶಕ್ತಿಯೊಂದಿಗೆ ಎದ್ದು ಕೂತರು. ಬಲಶಾಲಿ ಬಾಲಕ ಎಲ್ಲರೊಂದಿಗೆ ಸಂತಸದಿಂದ ಮನೆಗೆ ಬಂದ. ಮನೆಗೆ ಬಂದ ಮಕ್ಕಳನ್ನು ನೋಡಿ ತಾಯಿಗೆ ಅತೀವ ಆನಂದವಾಯಿತು.

(ಮುಗಿಯಿತು)

**ಆಧಾರ: ಡಿ.ಎನ್. ಶ್ರೀನಾಥ್**